ಗೊಬ್ಬರ ಹಾಗೂ ಮಳೆ ಹುಳು ಸಾಕಣೆ ಕೆಲಸಕ್ಕೆ ಜವಾಹರ ರೋಜಗಾರ್ ಯೋಜನೆ ವಿಸ್ತರಿಸುವುದು ಸಮರ್ಪಕವಲ್ಲವೇ,

ಆ) ಹಾಗಿದ್ದಲ್ಲಿ, ಪ್ರಸ್ತುತ ಹಣಕಾಸು ವರ್ಷದಲ್ಲಿ ಜವಾಹರ್‌ರೋಜ್‌ಗಾರ್ ಯೋಜನೆಯಲ್ಲಿ ಎಷ್ಟು ಹಣ ಮೀಸಲಿಡಲಾಗಿದೆ ಮತ್ತು ಎಷ್ಟು ಹಣ ಮೀಸಲಿಡಲಾಗುವುದು?

ಶ್ರೀ ಎಂ.ವೈ. ಘೋರ್ಪಡೆ.
(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)

ಹೌದು, ವೈಯಕ್ತಿಕ ಪ್ರಯೋಜನ ಪಡೆಯುವ ಕಾರ್ಯಕ್ರಮದಲ್ಲಿ ಬರುವ ಪರಿಶಿಷ್ಟ ಜಾತಿ:ಪರಿಶಿಷ್ಟ ಪಂಗಡಕ್ಕೆ ಸೇರಿದ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಜವಾಹರ್ ರೋಜ್‌ಗಾರ್ ಯೋಜನೆಯಲ್ಲಿ ಅವಕಾಶವಿರುತ್ತದೆ. ಆದರೆ, ಸಾಮೂಹಿಕ ಆಸ್ತಿಯನ್ನು ಸೃಷ್ಟಿಸುವ ಜವಾಹರ್ ರೋಜ್‌ಗಾರ್ ಯೋಜನೆಯ ಕಾರ್ಯಕ್ರಮದಡಿಯಲ್ಲಿ ಅವಕಾಶವಿರುವುದಿಲ್ಲ.

ಕೇಂದ್ರ ಸರಕಾರದ ಆದೇಶದ ಮೇರೆಗೆ ಪರಿಶಿಷ್ಟ ಜಾತಿ ಮತ್ತ ಪರಿಶಿಷ್ಟ ಪಂಗಡದವರ ವೈಯಕ್ತಿಕ ಸೌಲಭ್ಯಗಳಿಗಾಗಿ ಮೀಸಲಾಗಿಟ್ಟ ಶೇಕಡ ೨೨.೫೮ ಅನುದಾನದಲ್ಲಿ ವಾರ್ಷಿಕ ಕ್ರಿಯಾಯೋಜನೆಯಲ್ಲಿ ಈ ಕಾಮಗಾರಿಗಳು ಸೇರ್ಪಡೆಯಾಗಿದ್ದಲ್ಲಿ ಮಾತ್ರ ಖರ್ಚು ಮಾಡಬಹುದಾಗಿದೆ.

ವಿಷಯ:- ಕೊಳವೆ ಬಾವಿಗಳ ದುರಸ್ತಿಗೆ ತೆಗೆದುಕೊಂಡ ಕ್ರಮ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೧೦೫:- (೫೧೭)
ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ)
ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಾದ್ಯಂತ ಇರುವ ಕೊಳವೆ ಬಾವಿಗಳು ಎಷ್ಟು? (ಪ್ರತಿ ಜಿಲ್ಲಾವಾರು ವಿವರಣೆ ನೀಡುವುದು.)

ಆ) ಕೆಟ್ಟಿರುವ ಕೊಳವೆ ಬಾವಿಗಳನ್ನು ದುರಸ್ತಿಗೊಳಿಸಲು ಸರ್ಕಾರ ತೆಗೆಗುಕೊಂಡಿರುವ ಕ್ರಮಗಳೇನು?

ಶ್ರೀ ಎಂ.ವೈ. ಘೋರ್ಪಡೆ
(ಗ್ರಾಮೀಣಾಭಿವೃದ್ಧಿ ಪಂ.ರಾಜ್ ಸಚಿವರು)

ಡಿಸೆಂಬರ್ ೯೨ ರ ಅಂತ್ಯದವರೆಗೆ ರಾಜ್ಯದಾದ್ಯಂತ ೧,೨೪,೫೪೭ ಕೊಳವೆ ಬಾವಿಗಳನ್ನು ಆಳವಡಿಸಲಾಗಿದೆ.

ಬೆಂಗಳೂರು (ಗ್ರಾಮಾಂತರ)	೬೬೪೦,		
ಬೆಂಗಳೂರು (ನಗರ)	೩೧೯೮,	ಕೋಲಾರ	೭೪೯೫,
ತುಮಕೂರು	೯೬೩೨,	ಚಿತ್ರದುರ್ಗ	೭೧೪೮,
ಶಿವಮೊಗ್ಗ	೬೪೭೨,	ಚಿಕ್ಕಮಗಳೂರು	೪೬೪೨,
ಮೈಸೂರು	೯೨೬೭,	ಮಂಡ್ಯ	೬೧೦೪,
ಹಾಸನ	೭೯೫೭,	ದಕ್ಷಿಣ ಕನ್ನಡ	೬೯೪೪,
ಕೊಡಗು	೨೪೪೪,	ಬೆಳಗಾಂ	೭೪೪೪,
ಧಾರವಾಡ	೭೧೪೪,	ಉತ್ತರ ಕನ್ನಡ	೪೧೩೦,
ಬಿಜಾಪುರ	೬೩೨೫,	ಗುಲ್ಬರ್ಗ	೬೪೪೯,
ಬೀದರ	೩೧೩೬,	ರಾಯಚೂರು	೫೯೯೦,
ಬಳ್ಳಾರಿ.	೫೦೦೦,		

೧) ೧೪-೧೯೮೭ ರ ನಂತರ ಕೈಪಂಪುಗಳ ನಿರ್ವಹಣೆಯನ್ನು ಮಂಡಲ ಪಂಚಾಯಿತಿಗೆ ವಹಿಸಲಾಗಿದೆ. ಪ್ರತಿ ತಾಲೂಕಿನಲ್ಲಿರುವ ಜಿಲ್ಲಾ ಪರಿಷತ್ ಇಂಜನಿಯರಿಂಗ್ ಉಪ ವಿಭಾಗಗಳು ಮಂಡಲ ಪಂಚಾಯಿತಿಗೆ ಬೆಂಬಲ ನೀಡುತ್ತದೆ.

೨) ಜಿಲ್ಲಾ ಪರಿಷತ್ ಇಂಜನಿಯರಿಂಗ್ ವಿಭಾಗದಿಂದ ಆಯ್ಕೆಯಾಗಿ ಭೂಮಿಮೇಲಿರುವ ಕೈಪಂಪುಗಳ ಭಾಗವನ್ನು ದುರಸ್ತಿ ಮಾಡಲು ತರಬೇತಿ ಪಡೆದ ರಕ್ಷಕರು ಇರುತ್ತಾರೆ.

೩) ರಕ್ಷಕರು ಯಾಂತ್ರಿಕರ ಕೈಮೀರಿದ ಪಕ್ಷದಲ್ಲಿ ದುರಸ್ತಿಯ ಕೆಲಸಗಳು ತಾಲೂಕಿನ ಕೇಂದ್ರ ಕಚೇರಿಯಲ್ಲಿರುವ ಸಂಚಾರಿ ವಾಹನದ ಸಹಾಯದಿಂದ ದುರಸ್ತಿ ಮಾಡಲಾಗುತ್ತಿದೆ.

ವಿಷಯ:- ತೆಂಗಿಗೆ ತಗುಲಿರುವ ರೋಗದ ನಿಯಂತ್ರಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೧೦೬:- (೫೧೮)

ಶ್ರೀ ಮಾಟಾಳ್ ನಾಗರಾಜ್(ಚಾಮರಾಜನಗರ)

ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯದಲ್ಲಿ ತೆಂಗಿಗೆ ರೋಗಯಾವ ಯಾವ ಪ್ರದೇಶದಲ್ಲಿ ತಗುಲಿದೆ ಹಾಗೂ ಇದನ್ನು ನಿಯಂತ್ರಿಸಲು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎ.ಕೃಷ್ಣಪ್ಪ
(ತೋಟಗಾರಿಕಾ ಸಚಿವರು)

೧) ಕರ್ನಾಟಕ ರಾಜ್ಯದಲ್ಲಿ ತೆಂಗಿನ ಬೆಳೆಗೆ ರೋಗಯಾವುದೂ ತೀವ್ರ ವಾಗಿರುವುದಿಲ್ಲ ಆದರೆ ಕಪ್ಪು ತಲೆ ಹುಳುವಿನ ಬಾಧೆ ಬೆಂಗಳೂರು (ಗ್ರಾಮ)ಬೆಂಗಳೂರು (ನಗರ) ತುಮಕೂರು, ಮೈಸೂರು ಮಂಡ್ಯ, ಹಾಸನ, ಶಿವಮೊಗ್ಗ, ಚಿತ್ರದುರ್ಗ, ಕೋಲಾರ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಸ್ವಲ್ಪ ಹೆಚ್ಚಾಗಿ ಹಾಗೂ ಉತ್ತರ ಕನ್ನಡ ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಕಡಿಮೆ ಪ್ರಮಾಣದಲ್ಲಿ ಕೀಟಬಾಧೆ ಹರಡಿದೆ.

ಈ ರೋಗ ನಿಯಂತ್ರಣಕ್ಕಾಗಿ ಸರ್ಕಾರವು ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ.

೧) ರಾಜ್ಯದ ೧೧ ಜಿಲ್ಲೆಗಳಲ್ಲಿ ಪರೋಪಜೀವಿಗಳನ್ನು ವೃದ್ಧಿಪಡಿಸಿ ಬಾಧಕೊಳಗಾದ ತೋಟಗಳಲ್ಲಿ ಉಚಿತವಾಗಿ ಬಿಡುಗಡೆ ಮಾಡಲು ೫೦ ಪ್ರಯೋಗ ಶಾಲೆಗಳನ್ನು (೪೫ಸಣ್ಣ ಮತ್ತು ೪ ದೊಡ್ಡವು ಜಿಲ್ಲಾ ಪರಿಷತ್ ಯೋಜನೆಯಡಿ ಮತ್ತು ಒಂದು ದೊಡ್ಡದು ರಾಜ್ಯವಲಯದಡಿ) ತೆಗೆಯಲಾಗಿದೆ. ಡಿಸೆಂಬರ್ ೯೨ರ ಮಾಹೆಯವರೆಗೆ ೫೭.೫೦ ಲಕ್ಷ ಪರೋಪಜೀವಿಗಳನ್ನು ೨,೦೭೩ರೈತರುಗಳ ಕೀಟಬಾಧೆಯಿರುವ ತೋಟಗಳಲ್ಲಿ ಉಚಿತವಾಗಿ ಬಿಡುಗಡೆ ಮಾಡಲಾಗಿದೆ.

೨) ತೆಂಗು ಅಭಿವೃದ್ಧಿ ಮಂಡಳಿಯ ಸಹಾಯಧನದೊಂದಿಗೆ ೩ ಬೃಹತ್ ಪ್ರಮಾಣದ ಪರೋಪಜೀವಿ ವೃದ್ಧಿಪಡಿಸುವ ಪ್ರಯೋಗಶಾಲೆಗಳನ್ನು ತಿಪಟೂರು, ಉಡುಪಿ ಮತ್ತು ಹೊಸದುರ್ಗಗಳಲ್ಲಿ ಸ್ಥಾಪಿಸಿ, ಡಿಸೆಂಬರ್ ೯೨ ಮಾಹೆವರೆಗೆ ೧೯.೭೪ ಲಕ್ಷ ಪರೋಪಜೀವಿಗಳನ್ನು ಕೀಟಬಾಧೆಯಿರುವ ತೋಟಗಳಲ್ಲಿ ಉಚಿತವಾಗಿ ಬಿಡುಗಡೆ ಮಾಡಲಾಗಿದೆ.